287 (46) : ಶ್ರೀ ಅಶೋಕ ಆರ್. (ಉತ್ತರಹಳ್ಳಿ) ಮಾನ್ಯ ಕಂದಾಯ ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕೂಲಿಗಾಗಿ ಕಾಳು ಯೋಜನೆಯಡಿಯಲ್ಲಿನ ಅಕ್ಕಿ ಕಾಳಸಂತೆಕೋರರ ಪಾಲಾದ ನಂತರ ಎಚ್ಚೆತ್ತಿರುವ ಸರ್ಕಾರವು ಇನ್ನೂ ಮುಂದೆ ಬರಪರಿಹಾರ ಕಾಮಗಾರಿಗಳನ್ನು ಗ್ರಾಮ ಪಂಚಾಯ್ತಿ ವ್ಯಾಪ್ತಿಗೆ ನೀಡಲು ಮುಂದಾಗಿದೆಯೇ;

ಆ) ಹಾಗಿದ್ದಲ್ಲಿ, ಇದಕ್ಕೆ ಕಾರಣಗಳೇನು;

ಇ) ಇದರ ರೂಪು-ರೇಷೆಗಳೇನು (ಪೂರ್ಣ ವಿವರ ನೀಡುವುದು);

ಈ) ಇದರಿಂದಾಗಿ ತಾಲ್ಲೂಕು ಮಟ್ಟದಲ್ಲಿ ಇದ್ದಂತಹ ಶಾಸಕರ ಅಧ್ಯಕ್ಷತೆಯ ಬರಪರಿಹಾರ ಸಮಿತಿಯ ಅಸ್ಥಿತ್ವಕ್ಕೆ ಧಕ್ಕೆಯುಂಟಾಗುವುದಿಲ್ಲವೆ;

ಉ) ಅದರ ಕಾರ್ಯವ್ಯಾಪ್ತಿ ಏನು;

ಊ) ಕಾಮಗಾರಿಗಳನ್ನು ಹಾಗೂ ಕೂಲಿ-ಆಹಾರ ವಿತರಣೆಯನ್ನು ಯಾವ ರೀತಿ ಅನುಷ್ಠಾನಗೊಳಿಸಲಾಗುವುದು;

ಋ) ಗ್ರಾಮ ಪಂಚಾಯ್ತಿಗಳು ಈ ಕಾರ್ಯವನ್ನು ನಿರ್ವಹಿಸಲು ಸಮರ್ಥವಾಗಿವೆಯೇ; ಈ ದಿಸೆಯಲ್ಲಿನ ಸರ್ಕಾರದ ನಿಲುವೇನು?

ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಮತ್ತು ಸಂಸದೀಯ ವ್ಯವಹಾರಗಳ ಸಚಿವರು)

ಅ) ಪರಿಶೀಲಿಸಲಾಗುತ್ತಿದೆ.

ಆ) ಈಗಿರುವ ಭಾರತ ಸರ್ಕಾರದ ನಿಯಮಗಳಲ್ಲಿ ಪಂಚಾಯಿತಿಗಳಿಗೆ ನೀಡಲು ಅವಕಾಶವಿಲ್ಲ.

ಇ) ಪರಿಶೀಲನೆಯಲ್ಲಿರುವುದರಿಂದ ಅದು ಉದ್ಭವಿಸುವುದಿಲ್ಲ.

ಈ) ಹೌದು

ಉ) ಸಂಪೂರ್ಣ ತಾಲ್ಲೂಕಿನ ವ್ಯಾಪ್ತಿ ಇದೆ.

ಊ) ಆ ಪ್ರಶ್ನೆ ಈಗ ಉದ್ಭವಿಸುವುದಿಲ್ಲ.

ಋ) ಪರಿಶೀಲಿಸಲಾಗುತ್ತಿದೆ.

.....

290 (522) : Sri Darmasingh Hon'ble Chief Minister?

a) Whether it has come to the notice of the Government that names were left out from the electoral rolls during the last general elections?

b) What actions have been taken up in this regard?

c) Is it a fact that every voter has not been issued the voters' ID card properly?

d) When would the programme of issue of voter's ID cards be completed?

Sri Ashok R. (Uttarahalli)

a) Yes. This phenomenon has been noticed in some urban areas of a few cities like Bangalore, etc.

b) Petitions have been received from general public regarding missing of names from the voters' lists. The concerned District Election Officers have been instructed to find out the reasons for delection of names from the voters' lists and to take action to include the missing names in the concerned voters' lists, as per rules. Further, revision of electroral rolls with reference to 1-1-2005 as the qualifying date is being taken up shortly as per the direction of the Election Commission of India and the names of all the left out voters will be included in the voters' lists at that time.

c) Every voter has to come to the concerned polling Station (which is also called Designated Photography Location) to get himself potographed and to get the cards. So far 81% of the voters' have been issued EPICs.

d) The campaign of issue of voters' identity cards is a continuous process since fresh enrollment to the voters list will be made every year.

.....

291 (405) : ಶ್ರೀ ಬಸವಣ್ಣೆಪ್ಪ ಜಿ. (ಹೊಳೆಹೊನ್ನೂರು) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕಳೆದ ಮೂರು ವರ್ಷದಲ್ಲಿ ಕೇಂದ್ರ ಸರ್ಕಾರದಿಂದ ಕರ್ನಾಟಕ ರಾಜ್ಯಕ್ಕೆ, ಸಾರ್ವಜನಿಕ ವಿತರಣಾ ಪದ್ಧತಿ ಯೋಜನೆಯಡಿಯಲ್ಲಿ ಹಂಚಿಕೆ ಮಾಡಲಾದ ಆಹಾರಧಾನ್ಯಗಳ (ಅಕ್ಕಿ, ಗೋಧಿ ಮತ್ತು ಸೀಮೆಎಣ್ಣೆ) ಪ್ರಮಾಣ. (ವರ್ಷವಾರು, ಪದಾರ್ಥವಾರು ಸಂಖ್ಯೆ ಒದಗಿಸುವುದು)

ಆ) ಈ ವರ್ಷಗಳಲ್ಲಿ ಸರ್ಕಾರದಿಂದ ನೈಜ ಎತ್ತುವಳಿ ಮಾಡಲಾದ ಆಹಾರಧಾನ್ಯ ಪ್ರಮಾಣ (ವರ್ಷವಾರು, ಪದಾರ್ಥವಾರು ಸಂಖ್ಯೆ ಒದಗಿಸುವುದು):

ಇ) ಈ ವರ್ಷಗಳಲ್ಲಿ ಸರ್ಕಾರದಿಂದ ಎತ್ತುವಳಿ ಮಾಡಿಲ್ಲದ ಪದಾರ್ಥಗಳ ಪ್ರಮಾಣ.